


## ಎಳೆಮನಸ್ಸುಗಳಿಗೆ ಮಾರ್ಗದರ್ಶನ

‘ಮಾನಸ ಸರೋವರ ಅಲ್ಲೋಲ ಕಲ್ಲೋಲ’ (ಅ. 12, ಡಾ. ಶಿವಾನಂದ ಬಿ. ಹಿರೇಮಠ) ಮುಖಪುಟ ಲೇಖನ ಓದಿದೆ. ನನಗೂ ಇದು ಹೊಸ ಪಾಠ. ಕಲಕುವ ನೀರಿನಲ್ಲಿ ತನ್ನದೇ ಪ್ರತಿಬಿಂಬ ಕಾಣಲು ಸಾಧ್ಯವಿಲ್ಲ. ಮನಸ್ಸಿನಲ್ಲಿ ಏಳುವ ಕಂಪನಕ್ಕೆ ಮನಸ್ಸೆಂಬ ಸುಂದರ ಸರೋವರ ಅಲ್ಲೋಲ ಕಲ್ಲೋಲವಾಗುವ ಮತ್ತು ಎಳೆಯ ಮನಸ್ಸುಗಳು ತಮ್ಮ ಬದುಕನ್ನು ಒತ್ತಡಕ್ಕೆ ದೂಡಿ ಸಮಸ್ಯೆಯನ್ನು ಸೃಷ್ಟಿಸಿಕೊಳ್ಳುವ ಈ ಸಂದರ್ಭದಲ್ಲಿ ಮಾರ್ಗದರ್ಶನದಂತಿದೆ ಲೇಖನ. ನಮಗರಿಯದ ಎಷ್ಟೋ ಕಾಯಿಲೆಗಳು ಇವೆ ಎಂಬ ಅರಿವು ಮೂಡಿಸಿತು.

–ರಮೇಶ ಗಬ್ಬೂರ್, ಗಂಗಾವತಿ

## ಹೊನ್ನಂಬರಿಯ ಹೊಸ ವಿಷಯ

‘ಹೊನ್ನಗುಣದ ಹೊನ್ನಂಬರಿ’ (ಅ. 12, ಸಿದ್ದು ಸತ್ಯಣ್ಣವರ) ಲೇಖನದಲ್ಲಿ ಹೊನ್ನಂಬರಿ ತಂಗಡಿ ಗಿಡದ ಕುರಿತು ಹಲವು ಮಾಹಿತಿಗಳಿವೆ. ಹೊಸ ವಿಷಯಗಳನ್ನು ತಿಳಿದುಕೊಂಡಂತಾಯಿತು. ಇಂಥ ಇನ್ನಷ್ಟು ಲೇಖನಗಳು ಪ್ರಕಟಗೊಳ್ಳಲಿ.

–ಉಮೇಶ್ ಸಿ ಯಾದವ್,
ಮಾರಮ್ಮನಹಳ್ಳಿ

## ಯುವಜನರ ಮನಸ್ಸಿನ ಪ್ರತಿಬಿಂಬ

‘ಕಂಡೀಷನ್ಸ್ ಅಪ್ಲೈ’ (ಅ. 12, ನಳಿನಿ ಟಿ. ಭೀಮಪ್ಪ) ಲೇಖನ, ಯುವಜನರ ಮನೋಭಾವದ ಪ್ರತಿಬಿಂಬದಂತಿದೆ. ವಯಸ್ಸು ಮೀರುತ್ತಿದ್ದರೂ ಹುಡುಗಿಯರು ಮದುವೆ ಬಗ್ಗೆ ಯೋಚನೆ ಮಾಡಿಲ್ಲ ಎನ್ನುತ್ತಾರೆ. ಇನ್ನೂ ಕೆಲವರು ಮದುವೆಯೇ ಬೇಡ ಎಂದು ಖಡಾಖಂಡಿತವಾಗಿ ಹೇಳುತ್ತಿದ್ದಾರೆ. ಆರ್ಥಿಕವಾಗಿ ಸ್ವತಂತ್ರರಿರುವ ಅವರು ಈ ಪ್ರಶ್ನೆ ಕೇಳುವುದು ಸಹಜವೇ. ಆದರೆ ದಾಂಪತ್ಯದ ಉದ್ದೇಶ ಆರ್ಥಿಕತೆ ಮಾತ್ರವೇ? ಸಂಗಾತಿಯೊಂದಿಗೆ ಹಂಚಿಕೊಳ್ಳುವ ಭಾವನೆಗಳು, ಏಕತಾನತೆಯ ಬದುಕಿನಲ್ಲಿ ಕನಸು ತುಂಬುವ ಮಕ್ಕಳ ಸಾಂಗತ್ಯ, ಇವೆಲ್ಲ ಬೇಡವಾದವೇ?

–ನಂದಾ ಕುರಂದವಾಡ, ಹುಬ್ಬಳ್ಳಿ

## ಆ್ಯಂಟಿಬಯೊಟಿಕ್; ಅನಗತ್ಯ ಬೇಡ

‘ವೈರಾಣು ಜ್ವರದ ಬಳಿಕ’ (ಅ. 12, ಡಾ. ವಿನಯ ಶ್ರೀನಿವಾಸ್) ಆರೋಗ್ಯ ಲೇಖನದಲ್ಲಿ, ‘ವೈರಾಣು ವಿರುದ್ಧ ಕೆಲಸ ಮಾಡುವ ಆ್ಯಂಟಿಬಯೊಟಿಕ್ ಔಷಧಗಳು ಆರಂಭದ ಹಂತದಲ್ಲಿ ಮಾತ್ರವೇ ನೆರವಾಗುವುದರಿಂದ...’ ಎಂಬ ವಾಕ್ಯ ತಪ್ಪು ಸಂದೇಶ ನೀಡುವಂತಿದೆ. ವಾಸ್ತವಾಂಶ ಏನೆಂದರೆ ಆ್ಯಂಟಿಬಯೊಟಿಕ್ ಔಷಧಗಳು ಟೈಫಾಯಿಡ್, ನ್ಯುಮೋನಿಯಾ, ರಕ್ತದ ನಂಜು ಮುಂತಾದ ಬ್ಯಾಕ್ಟೀರಿಯಾಗಳ ಸೋಂಕುಗಳಲ್ಲಿ ಮಾತ್ರ ಕೆಲಸ ಮಾಡುತ್ತವೆ. ಆರಂಭದ ಹಂತದಲ್ಲಿಯೇ ಆಗಲಿ ನಂತರದ ಹಂತದಲ್ಲೇ ಆಗಲಿ ಸಾಮಾನ್ಯ ನೆಗಡಿ, ಫ್ಲೂ, ಡೆಂಗಿ ಮುಂತಾದ ವೈರಾಣು ಕಾಯಿಲೆಗಳಲ್ಲಿ ಅವುಗಳನ್ನು ಅನಗತ್ಯ ಬಳಸಬಾರದು. ಇದು ಆ್ಯಂಟಿಬಯೊಟಿಕ್ ಪ್ರತಿರೋಧಕ್ಕೆ (Antibiotic resistance) ಕಾರಣವಾಗಬಲ್ಲದು.

–ಡಾ. ಕೆ.ಬಿ. ರಂಗಸ್ವಾಮಿ

## ಕುತೂಹಲಕಾರಿ ಕಥಾನಕ

ಶೈಲಜಾ ಹಾಸನ ಅವರ ಧಾರಾವಾಹಿ ‘ಹೊಸಬೆಳಗು’, ಕುಟುಂಬ ವ್ಯವಸ್ಥೆಯ ಸುಂದರ ಚಿತ್ರಣ ನೀಡಿದೆ. ಕಾದಂಬರಿಯ ವಸ್ತು ವಿಷಯ ಆಸಕ್ತಿದಾಯಕವಾಗಿದೆ.

–ರಾಜೇಂದ್ರ ಹೆಗಡೆ, ಹಾವೇರಿ

## ‘ಮಂದಹಾಸ’ಕ್ಕೆ ತಕ್ಕ ಲೇಖನ

‘knee ಇರಲು ಜೊತೆಯಲ್ಲಿ’ (ಅ. 12, ಸುಮಾ ರಮೇಶ್) ಮಂದಹಾಸ ಲೇಖನ ಸ್ವಾರಸ್ಯಕರವಾಗಿದೆ. 40 ವರ್ಷಕ್ಕೇ ದಾಂಗುಡಿ ಇಡುತ್ತಿರುವ ಕೀಲು ನೋವು, ಇನ್ನಷ್ಟು ಓಡಾಡಿ ಲೋಕ ನೋಡಿ ಅನುಭವಿಸಬೇಕು ಎನ್ನುವುದರೊಳಗೆ ಬ್ರೇಕ್ ಹಾಕಿ ನಿರಾಸೆಪಡಿಸುತ್ತಿದೆ. ಮಂಡಿ ನೋವಿನ ಬಗ್ಗೆ ಡಾಕ್ಟರ್ ಹತ್ತಿರ ಹೋದರೆ, ‘ಏಜ್ ಫ್ಯಾಕ್ಟರ್’ ಎಂದು ಕಾರಣಕೊಟ್ಟು ಬಾಯಿ ಮುಚ್ಚಿಸಿಬಿಡುವರು.



ಹಲವಾರು ವಾಸ್ತವಿಕ ಅಂಶಗಳೊಂದಿಗೆ ಹೆಣೆದ ಲೇಖನ ಬಹಳ ಚೆನ್ನಾಗಿದೆ. ಇಂಥ ಬರಹಗಳು ಸಾಮಾನ್ಯ ಓದುಗನನ್ನು ಇಷ್ಟಪಟ್ಟು ಓದುವಂತೆ ಮಾಡುತ್ತವೆ.

–ನಾಮ ಮರುಳಾರಾಧ್ಯ, ಆದವಾನಿ

## ಹಾಸ್ಯಗರ್ಭಿತ ಬರಹ

ಮಂದಹಾಸ ಲೇಖನ ಹಾಸ್ಯಗರ್ಭಿತ, ಅರ್ಥಗರ್ಭಿತವಾಗಿದೆ. ಶೀರ್ಷಿಕೆ ನೋಡಿಯೇ ನಗುಬಂತು. ಅನುಭವಿಸಿ ನೋವುಂಡವರಿಗೆ ಮಂಡಿ ನೋವಿನ ರುಚಿಯನ್ನು ಸವಿಯುವಂತೆ ಮಾಡಿತು.

–ಸಿ. ಸರಳಾಮಣಿ, ಮೈಸೂರು

## ಮುದ ನೀಡಿದ ಮಂದಹಾಸ

ಮನಕ್ಕೆ ಮುದ ನೀಡಿದ ಲೇಖನ. ಓದಿದ ನಂತರ ಬಹಳ ಸಮಯದವರೆಗೆ ನಗುತ್ತಲೇ ಇದ್ದೆ.

–ಜಯಶ್ರೀ, ಬೆಂಗಳೂರು

## ಮನದ ಕದ ತಟ್ಟಿತು

‘ಧನ್ಯವಾದ’ (ಅ.12, ಗೀತಾ ಸೀತಾರಾಮ್), ಮನದೊಳಗೆ ಇಳಿದು ಮನದ ಕದವ ತಟ್ಟಿ ಬಂದ ಕಥೆ. ನಂದುನಂತಹ ಮಗನನ್ನು ವಿಶೇಷ ಅಕ್ಕರೆ, ಕಾಳಜಿಯಿಂದ ಸಲಹಿ ಕೊನೆಗೆ ವಿದಾಯ ಹೇಳಿ ಕಳುಹಿಸಿದ ಜಾನಕಮ್ಮನ ಪಾತ್ರವಂತೂ ಅದ್ಭುತ.

–ವಿಜಯಾ ಪ್ರಸಾದ್, ಬೆಂಗಳೂರು

## ಕಲ್ಲೆದೆಯೂ ಕರಗುವುದು

ತಾಯಿಯ ಮಮತೆಯ ಮನಸ್ಸು ಮುಟ್ಟುವ



ಬರಹವಿದು. ಎಂಥ ಕಲ್ಲು ಹೃದಯವೂ ಕ್ಷಣ ಕಾಲ ಕಂಪಿಸುವಂತೆ ಮಾಡುವ, ಭಾವನಾತ್ಮಕವಾದ, ಒಂದು ಹೃದಯಸ್ಪರ್ಶಿ ಕಥೆ ಎನ್ನಬಹುದು.

–ಸುಭಾಷ್, ಕೀರ್ತಿ ಕೆ.ಎನ್.

## ತಾಯಿಯ ಅನನ್ಯ ಭಾವ

ಕಥೆ ಓದಿ ಮನ ಮಿಡಿಯಿತು. ಬೌದ್ಧಿಕ ಬೆಳವಣಿಗೆ ಕೊರತೆಯಿಂದ ಅಸಹನೀಯ ಬದುಕಿನಿಂದ ಬಳಲುತ್ತಿದ್ದ ಮಗನಿಗೆ ಸಾವಿನಿಂದಾಗಿ ಮುಕ್ತಿ ದೊರೆತಾಗ, ಆ ತಾಯಿ ತೋರಿದ ಸ್ಥೈರ್ಯ ಅನನ್ಯ ಎನಿಸಿತು. ಕಥೆಯ ಮುಕ್ತಾಯದಲ್ಲಿನ ವಾಕ್ಯಗಳು ಕಣ್ಣಲ್ಲಿ ನೀರಾಡಿಸಿದವು. ಇಂಥ ಅದೆಷ್ಟೋ ತಾಯಂದಿರು ನಮ್ಮ ನಡುವಿದ್ದಾರೆ.

–ಪ್ರಭಾ ಪ್ರಸಾದ್

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in